**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ಃ 335/2022**

**ಫಿರ್ಯಾದುದಾರರುಃ** ರಾಜ್ಯದ ಪರ ಹಳೇಬೀಡು ಪೊಲೀಸರು

ವಿರುದ್ಧ

**ಆರೋಪಿ** **ಗೌರೀಶ**

**ಃದೋಷಾರೋಪಣೆಃ**

**ಹಾಸನದ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶನಾದ ಟಿ.ಎಸ್. ಇನವಳ್ಳಿ, ನಾನು,**

ಆರೋಪಿ,

ಗೌರೀಶ,
ತಂದೆ ಕಂದಸ್ವಾಮಿ,
ವಯಸ್ಸು 46 ವರ್ಷ,
ಅಂಗಡಿಹಳ್ಳಿ ಗ್ರಾಮ,
ಮಾದಿಹಳ್ಳಿ ಹೋಬಳಿ,
ಬೇಲೂರು ತಾಲ್ಲೂಕು,
ಹಾಸನ ಜಿಲ್ಲೆ

ನಿಮ್ಮ ವಿರುದ್ಧ ಮಾಡುವ ದೋಷಾರೋಪಣೆ ಏನೆಂದರೆ,

ದಿನಾಂಕ 28.08.2022 ರಂದು, ಈ ನ್ಯಾಯಾಲಯದ ವ್ಯಾಪ್ತಿಗೆ ಸೇರಿದ ಹಳೇಬೀಡು ಪೊಲೀಸ್ ಠಾಣಾ ಸರಹದ್ದಿನ ಬೇಲೂರು ತಾಲ್ಲೂಕು ಮಾದಿಹಳ್ಳಿ ಹೋಬಳಿ ಅಂಗಡಿಹಳ್ಳಿ ಗ್ರಾಮದಲ್ಲಿ ನೀನು ಆರೋಪಿ ಸ್ಫೋಟಕ ವಸ್ತು ಸ್ಫೋಟಿಸಿ ವ್ಯಕ್ತಿ ಮತ್ತು ವಸ್ತುಗಳಿಗೆ ಅಪಾಯ ಉಂಟಾಗುತ್ತದೆ ಎನ್ನುವ ಅರಿವು ಇದ್ದೂ ಸಹ ಚಾಸಾ-2 ಮಂದಾಕಿನಿರವರ ಮನೆಯ ಮೇಲಿನ ಸಿಮೆಂಟ್ ಶೀಟ್ ಮೇಲೆ ಸ್ಫೋಟಕ ವಸ್ತು ತುಂಬಿದ್ದ ಡಬ್ಬಿಯನ್ನು ನಿರ್ಲಕ್ಷ್ಯತೆಯಿಂದ ಒಣಗಲು ಇಟ್ಟಿದ್ದಿ ಮತ್ತು ಈ ಕಾರಣದಿಂದ ನೀನು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಸ್ಫೋಟಕ ವಸ್ತುಗಳ ಕಾಯಿದೆ ಕಲಂ 3(ಎ) ಮತ್ತು 4(ಬಿ)(i)ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ನೀವು ಆರೋಪಿ ಈ ಮೇಲೆ ಹೇಳಿದಂತೆ ಇಟ್ಟ ಸ್ಫೋಟಕ ವಸ್ತು ನಂತರ ಅದೇ ದಿನ ಸಿಡಿದು ಚಾಸಾ-2 ರವರ ಮನೆಯ ಮೇಲ್ಭಾಗದ ಸಿಮೆಂಟ್ ಶೀಟ್ ಛಿದ್ರಗೊಂಡು ಮನೆಯ ಒಳಗೆ ಹಾರಿ, ಸದರಿ ಮನೆಗೆ ನಷ್ಟ

ಉಂಟಾಗಿರುತ್ತದೆ ಮತ್ತು ಈ ಕಾರಣದಿಂದ ನೀನು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 427 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ ಸಮಯ ಹಾಗೂ ಸ್ಥಳದಲ್ಲಿ, ಈ ಮೇಲೆ ಹೇಳಿದಂತೆ ನೀನು ನಿರ್ಲಕ್ಷ್ಯತನದಿಂದ ಸ್ಫೋಟಕ ವಸ್ತುವನ್ನು ಒಣಗಲು ಇಟ್ಟು ಸದರಿ ಸ್ಫೋಟಕ ವಸ್ತು ಸಿಡಿದು, ಸದರಿ ಮನೆಯ ಒಳಗಡೆ ಇದ್ದ ಚಾಸಾ-2 ರವರ ಬಲಗೆನ್ನೆ, ಹಣೆಯ ಬಲಭಾಗ ಮತ್ತು ಗದ್ದಕ್ಕೆ ಸಾಮಾನ್ಯಸ್ವರೂಪದ ಗಾಯ ಮತ್ತು ಎಡಗೈಗೆ ತೀವ್ರಸ್ವರೂಪದ ಗಾಯ, ಚಾಸಾ-3 ನೇಯವರ ತಲೆಗೆ, ಬಲಗಾಲಿಗೆ ಮತ್ತು ಎಡಗಾಲಿನ ಹೆಬ್ಬೆರಳಿಗೆ ಸಾಮಾನ್ಯ ಸ್ವರೂಪದ ಗಾಯ, ಚಾಸಾ-4 ನೇಯವರ ಕುತ್ತಿಗೆಗೆ ಸಾಮಾನ್ಯ ಸ್ವರುಪದ ಗಾಯ ಮತ್ತು ಚಾಸಾ-3 ನೇಯವರ ಮಗುವಿನ ಎಡಗಾಲಿಗೆ ಸಾಮಾನ್ಯ ಸ್ವರೂಪದ ಗಾಯ ಹಾಗೂ ಚಾಸಾ-4 ನೇಯವರ 11 ದಿನದ ಮಗುವಿನ ಕೆನ್ನೆಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು ನಿಮ್ಮ ಆರೋಪಿಯ ನಿರ್ಲಕ್ಷ್ಯತನದಿಂದಾಗಿ ಈ ಮೇಲೆ ಹೇಳಿದ ಸಾಕ್ಷಿದಾರರಿಗೆ ಗಾಯವಾಗಿ ಅಪಾಯವಾಗಿರುತ್ತದೆ ಮತ್ತು ಈ ಕಾರಣದಿಂದ ನೀವು ಆರೋಪಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತ ದಂಡ ಸಂಹಿತೆ ಕಲಂ 286 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಮೇಲಿನ ದೋಷಾರೋಪಣೆಗೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕು ಎಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 18 ನೇ ಅಕ್ಟೋಬರ್ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ः 335/2022**

**ಫಿರ್ಯಾದುದಾರರುः** ರಾಜ್ಯದ ಪರ ಹಳೇಬೀಡು ಪೊಲೀಸರು

ವಿರುದ್ಧ

**ಆರೋಪಿ** **ಗೌರೀಶ**

| | | |
|---|---|---|
| ಆರೋಪಿಯ ಹೆಸರು | ः | ಗೌರೀಶ |
| ತಂದೆಯ ಹೆಸರು | ः | ಕಂದಸ್ವಾಮಿ |
| ವಯಸ್ಸು | ः | 46 ವರ್ಷ |
| ವೃತ್ತಿ | ः | - |
| ವಾಸ | ः | ಅಂಗಡಿಹಳ್ಳಿ ಗ್ರಾಮ, ಮಾದಿಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ |

**<u>ःಆಪಾದನೆः</u>**

ಪ್ರಶ್ನೆ 1ः ಈಗ ನಿನಗೆ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವೆಯಾ?

ಉತ್ತರः

ಪ್ರಶ್ನೆ 2ः ತಪ್ಪು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಗೆ ಒಳಪಡುತ್ತೀಯಾ?

ಉತ್ತರः

**ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿದ್ದು, ಆರೋಪಿಯು ಕೊಟ್ಟ ಉತ್ತರವನ್ನು ಆತನು ಹೇಳಿದಂತೆಯೇ ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.**

**ದಿನಾಂಕ 18 ನೇ ಅಕ್ಟೋಬರ್ ತಿಂಗಳು 2023 ನೇ ಇಸವಿ.**

**(ಟಿ.ಎನ್. ಇನವಳ್ಳಿ)**
**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**